ಓದವ್ನೆ ಅಂತ ಕೆಲಸ ಹಿಡ್ಕುಂಡ್ ನಿಂತಿದ್ದಾನ್ಲಾ? ಬಿಜಿನೆಸ್ ಮಾಡನಾಂತೆ ಬಿಜಿನೆಸ್ ಎಷ್ಟ್ ಮಡ್ಗಿದಾಯಿ ದುಡ್ನ? ನಿಮಪ್ಪ ನೋಡುದ್ರೆ ಒಂದೊಂದ್ರುಪಾಯ್ಗು ಬೆವರರಿಸ್ತಾನೆ. ಅಂತದ್ರಾಗೆ ಬಿಜನೆಸ್ ಮಾಡನಂತೆ ಬಿಜನೆಸ್ಸು. ನಿಮ್ಮಣ್ಣ ಬಿಜನೆಸ್ ಅಂತ ಓದೋನು ಏನಾದ? ಅವ್ನೂ ಬ್ಯಾಡ ಅಪ್ನೂ ಬ್ಯಾಡ ಅಂತ ಊರ್ನ ಬುಟ್‌ಬುಟ್ಟವ್ನೆ. ಇನ್ ನೀನು ಹೋಗ್ಬುಟ್ರೆ ಅವರ ಗತಿ ಏನ್ಲಾ? ಅದ್ಯಂಗರು ಇರ್ಲಿ ನಿಮ್ಮ ಮುತ್ತಾತನ್ ಕಾಲ್ದಿಂದ ಆ ಸ್ವಾಮಿಗೆ ಪೂಜೆ ನಿಮ್ ಮನೆದೇ ನೆಡ್ಕುಂಡ್ ಬಂದದೆ. ಬಡ್ಡೆತ್ತವ ನಿಮ್ಮಪ್ಪನ್ ತಲೇಗೆ ಮುಗ್ಸುಬಿಟ್ಟಾರಿ. ಮರ್ಯಾದೆಯಿಂದ ಪೂಜಾರ್ಕೆ ಮಾಡ್ಕಂಡು ಮನೆತನದ್ ಗೌರವ ಉಳಸ್ರಲಾ. ಅಂಗೂ ಬೇಕಾದ್ರೆ ನಿಮಪ್ಪ ನಿಮಕ್ಕ ಬರುವಾಗ ಕೊಟ್ಟಿರೋ ಎರಡ ಹಸ ಅವೆ. ಅವ್ನ ನಿಂಗೆ ಕೊಡ್ತೀನಿ. ಅವನ್ ಸಾಕಂಡು ಪೂಜಾರ್ಕೆ ಮಾಡ್ಕಂಡು ಜೀವನ ಮಾಡು... ಬಿಜಿನೆಸ್ಸು ಬಿಜಿನೆಸ್ಸು ಅಂದಾಯಲ್ಲ. ಪೂಜಾರ್ಕೆಗಿಂತ ದೊಡ್ಡ ಬಿಜಿನೆಸ್ ಯಾವ್ದಿದ್ದಾದ್ಲಾ? ಹೋಗು ಹೋಗು ಅಪ್ಪ ಅವ್ವ ಯೋಳ್ದ್ ಮಾತ್ ಕೇಳ್ಕಂಡು ಗಮ್ಮನ್ ಮನೇಲಿರು. ಈ ಸತಿ ಬರು ಜಾತ್ರೆಗೆ ಎಲ್ಲ ನಿಂದೆ ನಡೀಬೇಕು ಮತ್ತೆ, ಅದ್ಬುಟ್ಟು ನನ್ ಮಾತ್ ಮೀರುದ್ಯೋ ಬಡ್ಡೈದ್ನೆ ಮನೆ ಹೊಸ್ಲು ತುಳೀಸ್ದೆ ಮಡಗ್ಬುಡ್ತೀನಿ ಹುಷಾರು' ಎಂದು ತಮ್ಮ ಸಿಟ್ಟನ್ನೆಲ್ಲಾ ಹೊರಗೆ ಹಾಕುತ್ತಿದ್ದರು.

ಮಾದೇಶ ದಿಕ್ಕೇ ತೋಚದಂತೆ ಕಂಬಕ್ಕೆ ಒರಗಿ ನಿಂತಿದ್ದ. ಸುಬ್ಬಣ್ಣನವರ ಮಾತುಗಳು ಅವನ ಮೇಲೆ ಬಹಳ ಪರಿಣಾಮ ಬೀರಿದಂತೆ ಕಾಣುತ್ತಿತ್ತು. ತನ್ನ ಮನೆ ಬಿಟ್ಟರೆ ಅವನು ಅಕ್ಕನ ಮನೆ ಎಂದು ತೆಳ್ಳನೂರಿಗೆ ಬಿಟ್ಟರೆ ಬೇರೆ ಎಲ್ಲಗೂ ಹೋಗುತ್ತಿರಲಿಲ್ಲ. ಅದರಲ್ಲೂ ತನ್ನ ಅಕ್ಕ ಮದುವೆಯಾದಾಗಿನಿಂದಲೂ ಸುಬ್ಬಣ್ಣನವರ ಮಾತು ಎಂದೂ ಎತ್ತಾಕಿದವನಲ್ಲ. ಈಗ ಅವನಿಗೆ ಆಕಾಶ ತಲೆ ಮೇಲೆ ಬಿದ್ದಂತಾಗಿತ್ತು, ಸುಬ್ಬಣ್ಣನವರ ಮಾತು ತಿರಸ್ಕರಿಸಲು ಅವನ ಮನಸ್ಸು ನಿರಾಕರಿಸಿತು. ಒಮ್ಮೊಮ್ಮೆ ನಿರಾಕರಿಸಿ ಈ ಊರೇ ಬಿಟ್ಟು ದೂರ ಹೋಗಿಬಿಡುವುದು ಎನ್ನಿಸಿತು. ಆದರೂ ಸುಬ್ಬಣ್ಣನವರ ಮಾತನ್ನ ಎತ್ತಿ ಹಾಕಲು ಧೈರ್ಯವಿಲ್ಲದೆ ಒಂದು ದ್ವಂದ್ವದಲ್ಲೇ 'ಆಗಲಿ ಮಾವಯ್ಯ' ಎಂದು ಪಕ್ಕದಲ್ಲೇ ನಿಂತಿದ್ದ ಶಶಿಯ ಮುಖವನ್ನೊಮ್ಮೆ ನೋಡಿದ. ಆಕಾಶಕ್ಕೆ ಏಣಿ ಸಿಕ್ಕಂತಾಗಿ ಮಂದನಗೆ ಬೀರುತ್ತಾ ಶಶಿ ಅಡುಗೆ ಮನೆಯತ್ತ ಓಡಿ ಹೋದಳು.

ಇತ್ತ ಪೂಜಾರಿ ಬಸಯ್ಯನವರಿಗೆ ಸುದ್ದಿ ಕೇಳಿ ಸಂತೋಷಕ್ಕೆ ಪಾರವೇ ಇಲ್ಲದಂತಾಯ್ತು. 'ಆ ಬಡ್ಡಿ ಹೈದನ್ನ ಒಪ್ಪುದು ಎಷ್ಟ್ ಕಷ್ಟ ಆಯ್ತು ನೋಡಮ್ಮಿ, ಯಂಗೋ ಆ ನಮ್ಮಪ್ಪನ್ನ ಧರೆಗೆ ದೊಡ್ಡೋನು ಅನ್ನೋದು ಸುಮ್ನೆಯಾ? ವತ್ತಾರೆನಾಗ್ ತಾನೆ ನಿನ್ ಮಂಡೆ ಮ್ಯಾಲ್ ಹೂ ಬಿಳ್ಬೇಕಾದ್ರೆ ಅವನ್‌ಗ್ ಒಳ್ಳೆ ಬುದ್ಧಿ ಕೊಡು ಅಂತ ಬೇಡ್ಕುಂಡಿದ್ದೆ. ನೋಡು ಆ ನಮಪ್ಪ ಕಣ್ ಬುಟ್ಟು ದಾರಿ ತೋರ್ಸವ್ನೆ' ಎಂದು ಸುಶೀಲಮ್ಮನಿಗೆ ಹೇಳುತ್ತಿದ್ದಂತೆ, 'ಹ್ಞೂ ಕನ್ ಬುಡಿ ಯಂಗೋ ನನ್ ಕೂಸು ಒಪ್ತಲ್ಲ ಅದ್ಕೆ ಸ್ಯಾನೆ ಸಂತೋಷ ಆಯ್ತದೆ. ಇನ್ನ ತಡ ಮಾಡುದ್ ಬ್ಯಾಡ ಕಣ ಬೇಗ ಚಿಕ್ಕಂದ್ವಾಡಿ ಅಯ್ನೋರ್ನ ಕರ್ಸಿ ಕತ್ಕೊಂದುದ್ ಕರಡ್ಗೆ ಹಾಕ್ಸಿ ಅವನ್ನ ವಟು ಬುಡುಸ್ಬುಡ್ಬೇಕು ಇಲ್ಲಾಂದ್ರೆ ಮತ್ತೆ ಯಾವಾಗ ಉಲ್ಟಾ ಹೊಡ್ದಾನೋ ಯೋಳುಕಾಗುದಿಲ್ಲ' ಎಂದು ಸುಶೀಲಮ್ಮನವರು ದೇವರ ಮನೆಯಿಂದ ಹೂವೊಂದನ್ನು ತಂದು ಹೆಂಚಿನ ಮೇಲೆ ಎಸೆದರು.

ಮಾದೇಶ ದೂರದಲ್ಲಿ ಬರುತ್ತಿರುವುದನ್ನು ಗಮನಿಸಿದ ಸುಶೀಲಮ್ಮ ಅವನು ಬರುವುದು ಗೊತ್ತಿಲ್ಲದಂತೆ ಕೊಟ್ಟಿಗೆಯತ್ತ ನಡೆದರು. ಬಸಯ್ಯನವರು ನಿದ್ರೆ ಮಾಡುವ ಹಾಗೆ ಮಂಚದ ಮೇಲೆ ಕಣ್ಮುಚ್ಚಿ ಮಲಗಿದರು. ರೋಷ, ದ್ವೇಷವನ್ನೆಲ್ಲಾ ತುಂಬಿಕೊಂಡವನಂತೆ ಬಂದ ಮಾದೇಶ ಇಬ್ಬರಿಗೂ ಕೇಳುವಂತೆ 'ಅಲ್ಲಾ ಈ ದ್ಯಾವ್ರ್ಗೆ ಮಾಂಸ ಮಡ್ಗಿ ತಿನ್ನೋ ಜಾತಿವ್ರೆ ಜಾಸ್ತಿ ಬರೋದು. ಪೂಜಾರ್ಕೆನ ಮಾತ್ರ ನಮ್ ಜಾತಿವ್ರ್ಗೆ ಯಾಕ್ ಕೊಟ್ರೋ, ಅವ್ರ್ಗೆ ಯಾರ್ಗಾದ್ರು ಕೊಟ್ಟಿದ್ರೆ ಇವತ್ ನಂಗ್ ಈ ಪಾಡ್ ಬತ್ತಿತ್ತ' ಎಂದು ಗೊಣಗಿಕೊಂಡು ರೂಮಿನ ಬಾಗಿಲನು ಧಡಾರನೆ ಹಾಕಿದ. ಅಷ್ಟರಲ್ಲೇ ಒಳಬಂದ ಸುಶೀಲಮ್ಮನವರು 'ಯೋನುಂದ್ರೆ ಈ ಸೋಮಾರನೆ ಅಯ್ನೋರ್ನ ಕರ್ಸಿ ವಟು ಬುಡ್ಸೋ ಯವಸ್ಥೆ ಮಾಡಿ ಆಮ್ಯಾಲೆ ಅಮಾಸೆ ಬಂದ್ಬುಡ್ತಾದೆ, ಸಾಲೂರು ಮಠಕ್ಕೋಗಿ ಲಿಂಗ ತೆಕ್ಕಂಡು ಹಂಗೆ ಕರ್ಡ್ಗೆನೂ ತಂದ್ಬುಡಿ. ಅಷ್ಟಗಂಧ ಪೂಜೆ ಸಾಮಾನು ಎಲ್ಲನು ಇವತ್ತೇ ಹೋಗಿ ಅಯ್ನೋರ್ ಹತ್ರ ಬರಿಸ್ಕಂಡು ಬಂದ್ಬುಡಿ' ಎಂದರು. ರೂಮಿನ ಬಾಗಿಲು ಮತ್ತೊಂದು ಬಾರಿ ಢಮಾರ್ ಎಂದು ಸದ್ದಾಯಿತು.

ಸೋಮವಾರ ಬಸಯ್ಯನವರು ಎಲ್ಲಾ ವ್ಯವಸ್ಥೆಯನ್ನು